CC No.3579/2024
CW-1/ PW-3

**<u>ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ</u>**

**<u>CC No. 3579/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ ವಿ ಉಮೇಶ್ |
| ತಂದೆಯ ಹೆಸರು | : | ಲೇಟ್ ಬಿ ಹೆಚ್ ವೀರಭದ್ರಪ್ಪ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬೆಂಗಳೂರು-06. |
| ವಾಸಸ್ಥಳ | : | ಬೆಂಗಳೂರು |

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 17.08.2026

---

ನಾನು ದಿಃ 07.02.2024 ರಿಂದ 10.06.2024 ರವರೆಗೆ ಚನ್ನಪಟ್ಟಣ ವಲಯದಲ್ಲಿ ಅಬಕಾರಿ ನೀರಿಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.04.2024ರಂದು ಕಛೇರಿ ಸಿಬ್ಬಂದಿಯಾದ ಚಾಸಾ-4 ಮತ್ತು 5ರವರೊಂದಿಗೆ ಸಾರ್ವತ್ರಿಕ ಲೋಕಸಭಾ ಚುನಾವಣೆ 2024ರ ಪ್ರಯುಕ್ತ ಸರ್ಕಾರಿ ವಾಹನ ಸಂಖ್ಯೆ ಕೆಎ-42-ಜಿ-1026 ಮಹೇಂದ್ರ ಬುಲೋರೋ ವಾಹನದಲ್ಲಿ ಚನ್ನಪಟ್ಟಣ ಟೌನ್ ಕೋಟೆ ವರದರಾಜ ದೇವಸ್ಥಾನದ ರಸ್ತೆಯಲ್ಲಿ ಗಸ್ತು ನಡೆಸುತ್ತಿದ್ದಾಗ ದೇವಸ್ಥಾನದ ಬಳಿ ಬಂದಾಗ ಆಸಾಮಿ ಒಬ್ಬ ಬಿಳಿ ಬಣ್ಣದ ಬ್ಯಾಗನ್ನು ಹೊಂದಿ ದ್ವಿಚಕ್ರ ವಾಹನದಲ್ಲಿ ಬರುತ್ತಿರುವುದನ್ನು ಗಮನಿಸಿ ಆತನಿಗೆ ವಾಹನವನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಾಬರಿಗೊಂಡು

ವಾಹನವನ್ನು ದೇವಸ್ಥಾನದ ಬಳಿ ನಿಲ್ಲಿಸಿರುತ್ತಾನೆ. ನಂತರ ತಾನು ಇಟ್ಟುಕೊಂಡಿದ್ದ ಬ್ಯಾಗಿನಲ್ಲಿ ಏನಿದೆ ಎಂದು ಕೇಳಲಾಗಿ ಮದ್ಯದ ಪೌಚ್ ಗಳು ಮತ್ತು ಬಿಯರ್ ಬಾಟಲಿಗಳು ಇವೆ ಎಂದು ಹೇಳಿರುತ್ತಾನೆ. ನಂತರ ಸಾರ್ವಜನಿಕರನ್ನು ಅಂದರೆ ಚಾಸಾ-2 ಮತ್ತು 3ರವರಿಗೆ ಘಟನಾ ಸಂಬಂಧ ಸಂಕ್ಷಿಪ್ತವಾಗಿ ವಿವರಿಸಿ ಮಹಜರ್ ಕ್ರಮಕ್ಕೆ ಪಂಚರಾಗಿ ಬರಲು ಕೋರಿದ್ದು ಅವರು ಒಪ್ಪಿದ ಮೇರೆಗೆ ನೋಟೀಸನ್ನು ಜಾರಿ ಮಾಡಲಾಯಿತು. ನಂತರ ಮಾನ್ಯ ನ್ಯಾಯಾಲಯದ ಅನುಮತಿ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಕಲಂ.54ರಂತೆ ಶೋಧನಾ ವಾರೆಂಟನ್ನು ಸ್ಥಳದಲ್ಲೆ ತಯಾರಿಸಿ ಪಂಚರ ಸಹಿಯನ್ನು ಪಡೆದಿರುತ್ತೇನೆ. ನಂತರ ಪಂಚರ ಸಮಕ್ಷಮ ಬಟ್ಟೆಯ ಬ್ಯಾಗನ್ನು ಪರಿಶೀಲಿಸಲಾಗಿ ವಿವಿಧ ಬಗೆಯ ಮದ್ಯದ ಟೆಟ್ರಾ ಪ್ಯಾಕೇಟಗಳು ಮತ್ತು ಬಿಯರ್ ಗಳು ಕಂಡುಬಂದಿದ್ದು ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ, 90 ಎಂ ಎಲ್ ನ ಹೈವಾರ್ಡ್ಸ್ ಚಿಯರ್ಸ್ Wiscky 100 ಟೆಟ್ರಾ ಪ್ಯಾಕೇಟಗಳು,  180 ಎಂ ಎಲ್ ನ ಒಲ್ಡ್ ಟವರಿನ್ 20 ಪ್ಯಾಕೇಟ್ಟಳು, 650 ಎಂ ಎಲ್ ನ ಟ್ಯೂಬರ್ ಗಳು 15 ಬಿಯರ್ ಬಾಟಲಿಗಳು ಕಂಡುಬಂದಿದ್ದು, ಸದರಿ ವ್ಯಕ್ತಿಯನ್ನು ಈ ಪ್ರಮಾಣದ ಮದ್ಯವನ್ನು ಸಾಗಾಟ ಮಾಡಲು ತಮ್ಮ ಬಳಿ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಆತನು ಇಲ್ಲ ಎಂದು ನುಡಿದಿರುತ್ತಾನೆ. ಸದರಿ ಆರೋಪಿತನು ಹೊಂದಿದ್ದ ಮದ್ಯವನ್ನು ನಮ್ಮ ವಶಕ್ಕೆ ಪಡೆದು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 90 ಎಂ ಎಲ್ ನ ಹೈವಾರ್ಡ್ಸ್ ಚಿಯರ್ಸ್ Wiscky 100 ಟೆಟ್ರಾ ಪ್ಯಾಕೇಟಗಳ ಪೈಕಿ 20,  180 ಎಂ ಎಲ್ ನ ಒಲ್ಡ್ ಟವರಿನ್ Wiscky ಯ 20 ಪ್ಯಾಕೇಟ್ಟಳ ಪೈಕಿ 05 ಟೆಟ್ರಾ ಪ್ಯಾಕೇಟ್ಟಳು, 650 ಎಂ ಎಲ್ ನ ಟ್ಯೂಬರ್ ಬಿಯರ್ 15 ಬಾಟಲ್ ಗಳ ಪೈಕಿ 2 ಬಾಟಲ್ ಗಳನ್ನು

ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಶೀಲ್ ಮಾಡಿ ನಮ್ಮ ಇಲಾಖಾ ಶೀಲನ್ನು ಒತ್ತಿರುತ್ತೇವೆ. ಇನ್ನುಳಿದ ಮದ್ಯಗಳನ್ನು ನಮ್ಮ ಇಲಾಖಾ ವಶಕ್ಕೆ ಪಡೆದು ಮುಂದಿನ ಕ್ರಮ ಜರುಗಿಸಿರುತ್ತೇವೆ. ನಂತರ ಸದರಿ ವ್ಯಕ್ತಿಯ ವಿಳಾಸ ಕೇಳಲಾಗಿ ಆತನ ಹೆಸರು ಡಿ ಕೃಷ್ಣ ಬಿನ್ ಲೇಟ್ ಕೃಷ್ಣೇಗೌಡ, 59 ವರ್ಷ, ಒಕ್ಕಲಿಗ ಜನಾಂಗ, ಗುಡ್ಡೇತಿಮ್ಮಸಂದ್ರ ಗ್ರಾಮ, ಮಳೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು ಎಂದು ತಿಳಿದುಬಂದಿರುತ್ತದೆ. ಆರೋಪಿಯು ಸವಾರಿ ಮಾಡುತ್ತಿದ್ದ ಮೋಟಾರ್ ಸೈಕಲನ್ನು ವಶಪಡಿಸಿಕೊಂಡಿದ್ದು ಸದರಿ ಮೋಟಾರ್ ಸೈಕಲ್ ಹಿರೋ ಹೊಂಡ ಸ್ಪ್ಲೆಂಡರ್ ಕೆಎ-01-ಇಪಿ-1276ನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಆರೋಪಿಯು ಯಾವುದೇ ರಹದಾರಿ ಇಲ್ಲದೆ ಸದರಿ ಪ್ರಮಾಣದ ಮದ್ಯವನ್ನು ಸಾಗಾಟ ಮಾಡುತ್ತಿದ್ದ ಕಾರಣ ಆತನ ವಿರುದ್ದ ನಾನು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಪಂಚರುದಾರರಿಗೆ ನೀಡಿದ ಲಿಖಿತ ನೋಟಿಸುಗಳನ್ನು ನಿಪಿ-3 ಮತ್ತು 4, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು 4(ಎ) ಎಂದು, ಶೋಧನಾ ವಾರೆಂಟನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಪಂಚನಾಮೆ ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಆರೋಪಿಯು ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮು.ಮಾ-1 ರಿಂದ 3ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

CC No.3579/2024
CW-1/ PW-3

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಶ್ರೀ ಟಿಎಂ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಂಜಸ ಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.